Ministry of Culture
Government of India
सत्यमेव जयते

Azadi Ka Amrit Mahotsav

ಕನ್ನಡ ರಾಜ್ಯೋತ್ಸವ

ಭಾರತೀಯ ವಿದ್ಯಾಭವನ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು

# 'ಸಾಹಿತ್ಯ ಚಿತ್ರೋತ್ಸವ' : ಆರು ಸಾಕ್ಷ್ಯಚಿತ್ರಗಳ ಪ್ರದರ್ಶನ : ನವಂಬರ್ 27 ಮತ್ತು 28, 2021

## ಕನ್ನಡದ ಧೀಮಂತ ಸಾಹಿತಿಗಳ ಜೀವನಚಿತ್ರ ಕಥಾಲೋಕ : ಬೆಳಗ್ಗೆ 10.30 ಗಂಟೆಯಿಂದ – ಮಧ್ಯಾಹ್ನ : 12.30ರವರೆಗೆ







ಉದ್ಘಾಟನೆ :

**ಡಾ. ಚಂದ್ರಶೇಖರ ಕಂಬಾರ**
ಅಧ್ಯಕ್ಷರು, ಕೇಂದ್ರ ಸಾಹಿತ್ಯ ಅಕಾದೆಮಿ.

ಮುಖ್ಯ ಅತಿಥಿ :

**ಶ್ರೀ ಪಿ. ಶೇಷಾದ್ರಿ**
ರಾಷ್ಟ್ರ ಪ್ರಶಸ್ತಿ ವಿಜೇತ ಚಲನಚಿತ್ರ ನಿರ್ದೇಶಕರು

ಅಧ್ಯಕ್ಷತೆ :

**ಶ್ರೀ ಎಚ್.ಎನ್. ಸುರೇಶ್**
ನಿರ್ದೇಶಕರು, ಭಾರತೀಯ ವಿದ್ಯಾಭವನ

**27.11.2021 (ಶನಿವಾರ)**

**ಪ್ರದರ್ಶನಗೊಳ್ಳಲಿರುವ ಸಾಕ್ಷ್ಯ ಚಿತ್ರಗಳು:**

- **ಶ್ರೀ. ಪು.ತಿ. ನರಸಿಂಹಾಚಾರ್**
  ನಿರ್ದೇಶನ : ಡಾ. ಚಂದ್ರಶೇಖರ ಕಂಬಾರ
- **ಡಾ. ಜಿ.ಎಸ್. ಶಿವರುದ್ರಪ್ಪ**
  ನಿರ್ದೇಶನ : ಶ್ರೀ ಕೃಷ್ಣ ಮಾಸಡಿ
- **ಪ್ರೊ. ಎಸ್. ಎಲ್. ಭೈರಪ್ಪ**
  ನಿರ್ದೇಶನ : ಶ್ರೀ ಪಿ. ಶೇಷಾದ್ರಿ

**28.11.2021 (ಭಾನುವಾರ)**

**ಪ್ರದರ್ಶನಗೊಳ್ಳಲಿರುವ ಸಾಕ್ಷ್ಯ ಚಿತ್ರಗಳು:**

- **ಡಾ. ಯು.ಆರ್. ಅನಂತಮೂರ್ತಿ**
  ನಿರ್ದೇಶನ : ಶ್ರೀ ಕೃಷ್ಣ ಮಾಸಡಿ
- **ಶ್ರೀ ಗಿರೀಶ್ ಕಾರ್ನಾಡ್**
  ನಿರ್ದೇಶನ : ಶ್ರೀ ಕೆ.ಎಂ. ಚೈತನ್ಯ
- **ಡಾ. ಚಂದ್ರಶೇಖರ ಕಂಬಾರ**
  ನಿರ್ದೇಶನ : ಶ್ರೀ ಎನ್. ಎಸ್. ಶಂಕರ್

---

**ದಿನಾಂಕ : 27.11.2021 (ಶನಿವಾರ)**
**28.11.2021 (ಭಾನುವಾರ)**

**ಸ್ಥಳ: ಕೆ.ಆರ್.ಜಿ. ಸಭಾಂಗಣ,**
**ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್‌ರಸ್ತೆ, ಬೆಂಗಳೂರು – 560 001.**

---

**ವಿಶೇಷ ಆಕರ್ಷಣೆ : ಕೇಂದ್ರ ಸಾಹಿತ್ಯ ಅಕಾದೆಮಿ ನವದೆಹಲಿಯ ಪುಸ್ತಕಗಳು ಮತ್ತು ಡಿ.ವಿ.ಡಿ.ಗಳು ಮಾರಾಟಕ್ಕಿರುತ್ತವೆ**

**ಸರ್ವರಿಗೂ ಸುಸ್ವಾಗತ : ಪ್ರವೇಶ ಉಚಿತ**


Ministry of Culture
Government of India

Azadi Ka Amrit Mahotsav

ಕನ್ನಡ ರಾಜ್ಯೋತ್ಸವ

ಭಾರತೀಯ ವಿದ್ಯಾಭವನ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು

# ‘ಸಾಹಿತ್ಯ ಚಿತ್ರೋತ್ಸವ’



P.T. Narasimhachar
Directed by Chandrasekhar Kambar

**ಶ್ರೀ. ಪು.ತಿ. ನರಸಿಂಹಾಚಾರ್ :** 17.3.1905 – 13.10.1998 (ನಿರ್ದೇಶನ : ಡಾ. ಚಂದ್ರಶೇಖರ ಕಂಬಾರ)

ಕನ್ನಡಕಾವ್ಯದ ವಿಶಿಷ್ಟ ಧ್ವನಿ ಎನಿಸಿಕೊಂಡಿರುವ ಪು.ತಿ. ನರಸಿಂಹಾಚಾರ್ ಅವರು ಸಾಹಿತ್ಯ ಮತ್ತು ಸಂಗೀತದ ನಡುವೆ ಸಂಲಗ್ನತ್ವವನ್ನು ಸಾಧಿಸಿದವರು. ‘ಹಣತೆ’ಯಿಂದ ‘ಹಣತೆಯ ಹಾಡಿನ’ವರೆಗೆ 13 ಕವನ ಸಂಕಲನಗಳು, ‘ಶ್ರೀಹರಿ ಚರಿತೆ’ ಮಹಾಕಾವ್ಯ, ಅಹಲ್ಯೆ, ಗೋಕುಲ ನಿರ್ಗಮನ ಮೊದಲಾದ 13 ಗೀತ ನಾಟಕಗಳು, 5 ಪ್ರಬಂಧ ಸಂಕಲನಗಳು, ಏಳು ಅನುವಾದ, ಮೂರು ವಿಮರ್ಶಾ ಸಂಕಲನ ಹೀಗೆ ಅವರ ಬರವಣಿಗೆ ಬಹು ವ್ಯಾಪಕವಾದದ್ದು. ಕೇಂದ್ರ ಸಾಹಿತ್ಯ ಅಕಾಡಮಿ, ಪಂಪ ಪ್ರಶಸ್ತಿ, ನೃಪತುಂಗ ಪ್ರಶಸ್ತಿ ಹೀಗೆ ಹಲವು ಗೌರವಗಳಿಗೆ ಪಾತ್ರವಾಗಿರುವ ಪು.ತಿ.ನ ಅವರ ಕುರಿತ ಆತ್ಮೀಯ ನುಡಿಚಿತ್ರವನ್ನು ಡಾ. ಚಂದ್ರಶೇಖರ ಕಂಬಾರ ಅವರು ಕಟ್ಟಿಕೊಟ್ಟಿದ್ದಾರೆ.



G.S. Sivarudrappa
Directed by Krishna Masadi

**ಡಾ. ಜಿ.ಎಸ್. ಶಿವರುದ್ರಪ್ಪ :** 7.2.1926 – 23.12.2013 (ನಿರ್ದೇಶನ : ಶ್ರೀಕೃಷ್ಣ ಮಾಸಡಿ)

ಕನ್ನಡದ ಪ್ರಮುಖ ಕವಿಗಳೂ ಆಗಿರುವ ಜಿ.ಎಸ್.ಶಿವರುದ್ರಪ್ಪ ದಕ್ಷ ಆಡಳಿತಗಾರರಾಗಿಯೂ ಹೆಸರಾದವರು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ, ಕರ್ನಾಟಕ ಸಾಹಿತ್ಯ ಅಕಾಡಮಿಯ ಅಧ್ಯಕ್ಷರಾಗಿ ಅವರು ರೂಪಿಸಿದ ವಿಚಾರ ಸಂಕಿರಣಗಳ ಸುವರ್ಣಯುಗ ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆಯನ್ನು ನೀಡಿದೆ. ಸಾಮಗಾನ, ದೀಪದ ಹೆಜ್ಜೆ, ತೆರೆದ ದಾರಿ, ವ್ಯಕ್ತಮಧ್ಯ, ವಿಮರ್ಶೆಯ ಪೂರ್ವ ಪಶ್ಚಿಮ, ಸೌಂದರ್ಯ ಸಮೀಕ್ಷೆ, ಮಹಾಕಾವ್ಯ ಪ್ರವೇಶ ಮೊದಲಾದವು ಅವರ ಪ್ರಮುಖ ಕೃತಿಗಳು. ಆರು ಸಂಪುಟಗಳಲ್ಲಿ ಅವರು ಸಂಪಾದಿಸಿದ ಶ್ರೀಸಾಮಾನ್ಯರಿಗೆ ಸಾಹಿತ್ಯಚರಿತ್ರೆ ಬಹು ಅಮೂಲ್ಯವಾದ ಕೊಡುಗೆ ಆಗಿದೆ. ಕರ್ನಾಟಕ ಸರ್ಕಾರದಿಂದ ರಾಷ್ಟ್ರಕವಿ ಮನ್ನಣೆಯನ್ನು ಅವರು ಪಡೆದಿದ್ದರು. ಜಿ.ಎಸ್.ಎಸ್ ಅವರ ಸಹೋದ್ಯೋಗಿ ಮತ್ತು ಒಡನಾಡಿ ಕೃಷ್ಣ ಮಾಸಡಿ ಆತ್ಮೀಯ ನೆಲೆಯಲ್ಲಿ ಈ ಸಾಕ್ಷ್ಯಚಿತ್ರವನ್ನು ರೂಪಿಸಿದ್ದಾರೆ.


Ministry of Culture
Government of India
सत्यमेव जयते

Azadi Ka Amrit Mahotsav

ಕನ್ನಡ ರಾಜ್ಯೋತ್ಸವ

ಭಾರತೀಯ ವಿದ್ಯಾಭವನ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು

# ‘ಸಾಹಿತ್ಯ ಚಿತ್ರೋತ್ಸವ’



**S.L. Bhyrappa**
Directed by P. Sheshadri

**ಪ್ರೊ. ಎಸ್. ಎಲ್. ಭೈರಪ್ಪ :** 20.6.1931 (ನಿರ್ದೇಶನ : ಶ್ರೀ ಪಿ. ಶೇಷಾದ್ರಿ)

ಭಾರತದ ಅತ್ಯಂತ ಜನಪ್ರಿಯ ಬರಹಗಾರರಲ್ಲಿ ಒಬ್ಬರು ಎನಿಸಿಕೊಂಡಿರುವ ಎಸ್.ಎಲ್. ಭೈರಪ್ಪ ಅವರ ಕಾದಂಬರಿಗಳು ಬಹುತೇಕ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿರುವುದಲ್ಲದೆ ಹಲವು ಮುದ್ರಣಗಳನ್ನೂ ಕಂಡಿವೆ. ವಂಶವೃಕ್ಷ, ಪರ್ವ, ತಂತು, ತಬ್ಬಲಿಯು ನೀನಾದೆ ಮಗನೆ, ನಾಯಿ ನೆರಳು, ಸಾಕ್ಷಿ ಮೊದಲಾದವು ಅವರ ಜನಪ್ರಿಯ ಕೃತಿಗಳು. ಭಿತ್ತಿ ಅವರ ಆತ್ಮಚರಿತ್ರೆ. ಭಾರತದ ವಿಶಿಷ್ಟ ಚಿಂತಕರಾಗಿರುವ ಭೈರಪ್ಪನವರಿಗೆ ಸರಸ್ವತಿ ಸಮ್ಮಾನ, ಕೇಂದ್ರ ಸಾಹಿತ್ಯ ಅಕಾಡಮಿಯ ಫೆಲೋಶಿಪ್ ಸೇರಿದಂತೆ ಹಲವು ಗೌರವಗಳು ದೊರಕಿವೆ. ಏಕಾಂತಪ್ರಿಯರಾದ ಭೈರಪ್ಪನವರ ಬಹಳ ಜನ ಅರಿಯದ ಮುಖಗಳನ್ನು ರಾಷ್ಟ್ರಪ್ರಶಸ್ತಿ ವಿಜೇತ ನಿರ್ದೇಶಕ ಪಿ.ಶೇಷಾದ್ರಿ ಸೊಗಸಾಗಿ ಇಲ್ಲಿ ಸೆರೆ ಹಿಡಿದಿದ್ದಾರೆ.



**U.R. Anantha Murthy**
Directed by Krishna Masadi

**ಡಾ. ಯು.ಆರ್. ಅನಂತಮೂರ್ತಿ :** 21.12.1932 – 22.08.2014 (ನಿರ್ದೇಶನ : ಶ್ರೀಕೃಷ್ಣ ಮಾಸಡಿ)

ಜಾಗತಿಕ ಮನ್ನಣೆಯನ್ನು ಪಡೆದ ವಿಶಿಷ್ಟ ಬರಹಗಾರಎಂದು ಹೆಸರು ಮಾಡಿರುವ ಡಾ. ಯು. ಆರ್. ಅನಂತ ಮೂರ್ತಿಯವರು ಹೊಸ ಮಾದರಿಯ ಚಿಂತನೆಗಳಿಗೆ ಹೆಸರಾದವರು. ಮಹಾತ್ಮಗಾಂಧಿ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ಕರ್ನಾಟಕ ಕೇಂದೀಯ ವಿಶ್ವವಿದ್ಯಾಲಯದ ಮೊದಲ ಕುಲಪತಿಯಾಗಿ ಕೂಡ ಅವರು ಕೆಲಸ ಮಾಡಿದ್ದಾರೆ. ಎಂದೆಂದೂ ಮುಗಿಯದ ಕಥೆಯಿಂದ ಆರಂಭಿಸಿ ಅವರಎಂಟು ಕಥಾಸಂಕಲನಗಳು, ಸಂಸ್ಕಾರ, ಭಾರತಿಪುರ, ಅವಸ್ಥೆ ಮೊದಲಾದ ಆರು ಕಾದಂಬರಿಗಳು, ಪ್ರಜ್ಞೆ ಮತ್ತು ಪರಿಸರದಿಂದ ಆರಂಭಿಸಿ ಆಚೀಚೆವರೆಗೆ 15 ವಿಮರ್ಶಾ ಸಂಕಲನಗಳು, ಸುರಗಿ ಆತ್ಮಕಥೆ ಸೇರಿ ವೈವಿಧ್ಯಮಯವಾದಅವರ ಕೃತಿಗಳು ಪ್ರಕಟವಾಗಿವೆ. ಭಾರತೀಯ ಜ್ಞಾನಪೀಠ, ಪದ್ಮಭೂಷಣ ಸೇರಿದಂತೆ ಹಲವು ಗೌರವಗಳನ್ನು ಪಡೆದ ಅವರು ಕೇಂದ್ರ ಸಾಹಿತ್ಯ ಅಕಾಡಮಿಯ ಅಧ್ಯಕ್ಷರಾಗಿ ಕೂಡ ಸೇವೆ ಸಲ್ಲಿಸಿದವರು. ಅವರ ‘ಅವಸ್ಥೆ’ ಕಾದಂಬರಿಯನ್ನು ಚಲನಚಿತ್ರವಾಗಿಸಿದ ಕೃಷ್ಣ ಮಾಸಡಿ ವಿಶಿಷ್ಟವಾಗಿ ಅನಂತಮೂರ್ತಿಯವರ ಬದುಕನ್ನು ಸೃಜನಾತ್ಮಕವಾಗಿ ಹಿಡಿದಿದ್ದಾರೆ.

Ministry of Culture
Government of India
सत्यमेव जयते

Azadi Ka Amrit Mahotsav

ಕನ್ನಡ ರಾಜ್ಯೋತ್ಸವ

ಭಾರತೀಯ ವಿದ್ಯಾಭವನ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು


# 'ಸಾಹಿತ್ಯ ಚಿತ್ರೋತ್ಸವ'



**Girish Karnad**
Directed by K.M. Chaitanya

**ಶ್ರೀ ಗಿರೀಶ್ ಕಾರ್ನಾಡ್ :** 21.12.1932 – 22.08.2014 (ನಿರ್ದೇಶನ : ಶ್ರೀ ಕೆ.ಎಂ. ಚೈತನ್ಯ)

ಜಾಗತಿಕ ಮಟ್ಟದಲ್ಲಿ ಮನ್ನಣೆ ಪಡೆದ ನಾಟಕಕಾರರು ಎನ್ನಿಸಿಕೊಂಡಿರುವ ಗಿರೀಶ್‌ಕಾರ್ನಾಡ್ ತುಘಲಕ್, ಹಯವದನ, ನಾಗಮಂಡಲ, ತಲೆದಂಡ, ಅಗ್ನಿ ಮತ್ತು ಮಳೆ ಮೊದಲಾದ ವಿಶಿಷ್ಟ ನಾಟಕಗಳನ್ನು ಬರೆದವರು. ತಬ್ಬಲಿಯು ನೀನಾದೆ ಮಗನೆ, ವಂಶವೃಕ್ಷ, ಒಂದಾನೊಂದು ಕಾಲದಲ್ಲಿ, ಚೆಲುವಿ, ಕಾಡು, ಕಾನೂರು ಹೆಗ್ಗಡತಿ, ಉತ್ಸವ್ ಮೊದಲಾದ ಚಿತ್ರಗಳನ್ನೂ ಅವರು ನಿರ್ದೇಶಿಸಿದ್ದಾರೆ. ಭಾರತೀಯ ಜ್ಞಾನಪೀಠ, ಪದ್ಮಭೂಷಣ ಅವರಿಗೆ ಸಂದಿರುವ ಗೌರವಗಳಲ್ಲಿ ಪ್ರಮುಖವಾದವು. ಕನ್ನಡದ ಭರವಸೆಯ ಪ್ರತಿಭೆ ಎನಿಸಿಕೊಂಡ ಕೆ.ಎಂ. ಚೈತನ್ಯ ಸೂಕ್ಷ್ಮವಾಗಿ ಕಾರ್ನಾಡ್ ಅವರ ಜೀವನಯಾನವನ್ನು ಈ ಸಾಕ್ಷ್ಯಚಿತ್ರದಲ್ಲಿ ಹಿಡಿದಿಟ್ಟಿದ್ದಾರೆ.



**Chandrashekhar Kambar**
Directed by N.S. Shankar

**ಡಾ. ಚಂದ್ರಶೇಖರ ಕಂಬಾರ :** 09.01.1937 (ನಿರ್ದೇಶನ : ಶ್ರೀ ಎನ್. ಎಸ್. ಶಂಕರ್)

ಕನ್ನಡದ ಬಹುದೊಡ್ಡ ದೇಸಿಪ್ರತಿಭೆ ಎನಿಸಿಕೊಂಡ ಚಂದ್ರಶೇಖರ ಕಂಬಾರರು ಹಲವು ಕ್ಷೇತ್ರಗಳಲ್ಲಿ ಸಾಧನೆಯನ್ನು ಮಾಡಿದ ಹಿರಿಯರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಸ್ಥಾಪಕ ಕುಲಪತಿಗಳಾಗಿದ್ದ ಅವರು ಎನ್.ಎಸ್.ಡಿ ನಿರ್ದೇಶಕರಾಗಿ, ಕರ್ನಾಟಕ ನಾಟಕ ಅಕಾಡಮಿ ಅಧ್ಯಕ್ಷರಾಗಿ ಮತ್ತು ಈಗ ಕೇಂದ್ರ ಸಾಹಿತ್ಯ ಅಕಾಡಮಿಯ ಅಧ್ಯಕ್ಷರಾಗಿ ಕೂಡ ಕೆಲಸ ಮಾಡುತ್ತಿದ್ದಾರೆ. 25 ನಾಟಕಗಳು, 11 ಕವನ ಸಂಕಲನಗಳು, 5 ಕಾದಂಬರಿಗಳು ಮತ್ತು ಐದು ಸಂಶೋಧನಾ ಗ್ರಂಥಗಳನ್ನು ಪ್ರಕಟಿಸುರುವ ಅವರ ಬರಹದ ವ್ಯಾಪ್ತಿ ವಿಸ್ತಾರವಾದದ್ದು. ಕರಿಮಾಯಿ, ಸಂಗೀತ, ಕಾಡುಕುದರೆ ಅವರು ನಿರ್ದೇಶಿಸಿದ ಚಿತ್ರಗಳು, ಗಾಯಕರಾಗಿ, ಕಲಾವಿದರಾಗಿ ಕೂಡ ಕಾಣಿಸಿಕೊಂಡಿರುವ ಅವರಿಗೆ ಭಾರತೀಯ ಜ್ಞಾನಪೀಠ, ಪದ್ಮಭೂಷಣ ಸೇರಿದಂತೆ ಹಲವು ಗೌರವಗಳು ಸಂದಿವೆ. ಪ್ರತಿಭಾವಂತ ಬರಹಗಾರ, ಸಿನಿಮಾ ನಿರ್ದೇಶಕ ಎನ್.ಎಸ್. ಶಂಕರ್ ಕಂಬಾರರ ಅಗಾಧವಾದ ವ್ಯಕ್ತಿತ್ವವನ್ನು ಈ ಸಾಕ್ಷ್ಯಚಿತ್ರದಲ್ಲಿ ಸೊಗಸಾಗಿ ಹಿಡಿದಿದ್ದಾರೆ.

**ವಿಶೇಷ ಸೂಚನೆಗಳು :** 1. ಆಸನದ ವ್ಯವಸ್ಥೆ : ಮೊದಲು ಬಂದವರಿಗೆ ಪ್ರಥಮ ಆದ್ಯತೆ
2. ಕೋವಿಡ್ ನಿಯಮಗಳಿಗನುಗುಣವಾಗಿ ಕಾರ್ಯಕ್ರಮ ನಡೆಯುವುದು.
3. ಪ್ರತಿ ಸಾಕ್ಷ್ಯಚಿತ್ರವು 30 ನಿಮಿಷಗಳನ್ನೊಳಗೊಂಡಿರುತ್ತದೆ.